# ಗುಣಶೇಖರ

■ ನಾಗೇಂದ್ರ ಚಕ್ರಗಿರಿ
ಕಲೆ: ಸಂತೋಷ್ ಸಸಿಹಿತ್ಲು

ವಿಜಯವರ್ಮನೆಂಬ ರಾಜನಿಗೆ ಸುಶೀಲ ಎಂಬ ಮಗಳಿದ್ದಳು. ಅವಳನ್ನು ವಿಚಿತ್ರವಾದ ಕಾಯಿಲೆಯೊಂದು ಬಾಧಿಸುತ್ತಿತ್ತು. ಅವಳ ಎರಡೂ ಪಾದಗಳ ಮೇಲೆ ಹುಣ್ಣುಗಳಾಗಿ ವಿಪರೀತ ನೋವಿನಿಂದ ನರಳುತ್ತಿದ್ದಳು. ಓಡಾಡುವುದೂ ಅಸಾಧ್ಯವಾಗಿಬಿಟ್ಟಿತ್ತು. ಯಾವ ಔಷಧಗಳೂ ಮಂತ್ರ ತಂತ್ರಗಳೂ ಅವಳ ಕಾಯಿಲೆಯನ್ನು ಗುಣಪಡಿಸಲಾಗಿರಲಿಲ್ಲ. ರಾಜ್ಯದಲ್ಲಿದ್ದ ವೈದ್ಯರೆಲ್ಲರ ಪ್ರಯತ್ನಗಳೂ ವಿಫಲವಾಗಿದ್ದವು. ರಾಜನಂತೂ ಅತೀವ ಚಿಂತಾಕ್ರಾಂತನಾಗಿ ರಾಜ್ಯಾಡಳಿತದಲ್ಲಿ ಆಸಕ್ತಿಯನ್ನೇ ಕಳೆದುಕೊಂಡಿದ್ದ.

ಒಂದು ದಿನ ಅರಮನೆಗೆ ಮಹಿಮಾನ್ವಿತರಾದ ತಪಸ್ವಿಗಳೊಬ್ಬರು ಆಗಮಿಸಿದರು. ರಾಜನು ಅವರನ್ನು ಯಥೋಚಿತವಾಗಿ ಸತ್ಕರಿಸಿ ತನ್ನ ಮಗಳ ಕಾಯಿಲೆಯ ಬಗ್ಗೆ ಅವರಿಗೆ ವಿವರಿಸಿ, ಆ ಕಾಯಿಲೆಯನ್ನು ವಾಸಿ ಮಾಡುವಂತೆ ಬೇಡಿಕೊಂಡ. ರಾಜಕುಮಾರಿಯನ್ನು ಪರೀಕ್ಷಿಸಿದ ಮುನಿಗಳು ‘ಮಹಾರಾಜ ನಿನ್ನ ಮಗಳ ಕಾಯಿಲೆಗೆ ಪರಿಹಾರವಿದೆ. ರಾಜ್ಯದ ಪಶ್ಚಿಮ ದಿಕ್ಕಿನಲ್ಲಿರುವ ಕಾಡಿನಲ್ಲಿರುವ ದೊಡ್ಡ ಪರ್ವತವೊಂದರ ತುತ್ತ ತುದಿಯಲ್ಲಿ ಔಷಧೀಯ ಗುಣಗಳಿಂದ ಕೂಡಿದ ಮರವೊಂದಿದೆ. ಅದರ ತೊಗಟೆಯನ್ನು ತೇದು ರಸವನ್ನು ಲೇಪಿಸಿದರೆ ನಿನ್ನ ಮಗಳ ವ್ರಣಗಳು ವಾಸಿಯಾಗುತ್ತವೆ. ಆದರೆ ಭೀಕರವಾದ ಕ್ರೂರ ಮೃಗಗಳಿಂದ ತುಂಬಿರುವ ಮತ್ತು ಅತ್ಯಂತ ಕಡಿದಾಗಿರುವ ಆ ಪರ್ವತವನ್ನೇರುವುದು ತುಂಬ ಕಷ್ಟ. ಹೇಗಾದರೂ ಮಾಡಿ ಆ ಮರದ ತೊಗಟೆ ತಂದರೆ ನಿನ್ನ ಮಗಳ ಕಾಯಿಲೆ ವಾಸಿಯಾದಂತೆಯೇ’ ಎಂದು ಹೇಳಿ ರಾಜನಿಂದ ಬೀಳ್ಕೊಂಡರು.

ಆ ಔಷಧೀಯ ವೃಕ್ಷದ ತೊಗಟೆಯನ್ನು ತಂದು ಕೊಡುವವರಿಗೆ ತನ್ನ ಅರ್ಧ ರಾಜ್ಯವನ್ನು ಕೊಡುವುದರ ಜೊತೆಗೆ ಮಗಳನ್ನು ಕೊಟ್ಟು ಮದುವೆ ಮಾಡುವುದಾಗಿಯೂ ರಾಜ ರಾಜ್ಯದಲ್ಲೆಲ್ಲಾ ಡಂಗೂರ ಸಾರಿಸಿದ. ಅರ್ಧ ರಾಜ್ಯದ ಮತ್ತು ರಾಜಕುಮಾರಿಯನ್ನು ಮದುವೆಯಾಗುವ ಆಸೆಯಿಂದ ಹಲವಾರು ಜನ ಮರದ ತೊಗಟೆ ತರಲು ಪ್ರಯತ್ನಿಸಿದರೂ ಪರ್ವತ ಏರಲಾರದೆ ಸೋತು ಹಿಂತಿರುಗುತ್ತಿದ್ದರು. ಪರ್ವತದ ಬುಡದಲ್ಲಿ ಕೂತು ಜನರು ಆಡುತ್ತಿದ್ದ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದ ಕೋತಿಯೊಂದು ಆ ಪರ್ವತವನ್ನೇರಿ, ವೃಕ್ಷವನ್ನು ಗುರುತಿಸಿ, ಬಹಳ ಕಷ್ಟದಿಂದ ತೊಗಟೆಯ ತುಂಡೊಂದನ್ನು ಮರದಿಂದ ಬೇರ್ಪಡಿಸಿ, ಅದನ್ನು ತೆಗೆದುಕೊಂಡು ಅರಮನೆ ತಲುಪಿತು. ಕಾವಲು ಸೈನಿಕರ ಕಣ್ಣು ತಪ್ಪಿಸಿ ಅರಮನೆಯ ಒಳಗೆ ಪ್ರವೇಶಿಸಿ, ತನ್ನ ಕೈಯಲ್ಲಿದ್ದ ತೊಗಟೆಯನ್ನು ರಾಜನ ಪಾದದ ಬಳಿ ಹಾಕಿತು. ತೊಗಟೆಯನ್ನೂ, ಅದನ್ನು ತಂದ ಕೋತಿಯನ್ನೂ ನೋಡಿದ ರಾಜ ಒಂದು ಕ್ಷಣ ಅವಕ್ಕಾಗಿ, ತೊಗಟೆಯನ್ನು ಕೈಗೆ ತೆಗೆದುಕೊಂಡು ರಾಜ ವೈದ್ಯರಿಗೆ ತೋರಿಸಿದ. ಅದನ್ನು ಪರಿಶೀಲಿಸಿದ ರಾಜ ವೈದ್ಯರು ಮುನಿಗಳು ಹೇಳಿದ ತೊಗಟೆ

